


ರೈತ ಮುಖಂಡ ಕಡಿದಾಳು ಶಾಮಣ್ಣ ಅವರ ಆತ್ಮಕಥೆ 'ಕಾಡ ತೊರೆಯ ಜಾಡು' ಪುಸ್ತಕ ಬಿಡುಗಡೆ ಸಮಾರಂಭದ ಚಿತ್ರ ಇದು. ಚಿತ್ರದಲ್ಲಿ ಪುಸ್ತಕದ ಲೇಖಕಿ ಅಕ್ಷತಾ ಹುಂಚದಕಟ್ಟೆ, ಕಡಿದಾಳು ಶಾಮಣ್ಣ, ಸಂಶೋಧಕ ಷ. ಶೆಟ್ಟರ್, ವಿಮರ್ಶಕಿ ಎಂ.ಎಸ್. ಆಶಾದೇವಿ ಇದ್ದಾರೆ.

ನೇತೃತ್ವದಲ್ಲಿ ನಾವು ಬೆತ್ತಲೆ ಸೇವೆಯನ್ನು ವಿರೋಧಿಸಿ ಹೋರಾಟ ಮಾಡಿದ್ದು, ಈ ಬಗ್ಗೆ ಬಹಳಷ್ಟು ಸಂಗತಿಗಳನ್ನು ಹಂಚಿಕೊಂಡೆವು. ನಂತರ ಕುಪ್ಪಳಿ, ಸೂಳೆಕೆರೆ ಮೊದಲಾದ ಜಾಗಗಳಿಗೆ ಶೆಟ್ಟರ್ ಜೊತೆ ಪ್ರವಾಸ ಮಾಡಿದ್ದೂ ಆಯಿತು. ಅವರಿಗೆ ನಮ್ಮೂರು, ನಮ್ಮ ಮನೆ ವಾತಾವರಣ ಬಹಳ ಹಿಡಿಸಿತು. ಆದ್ದರಿಂದ ಮರುವರುಷ ಅವರ ಮಗಳು ಮತ್ತು ಮೊಮ್ಮಕ್ಕಳು ಆಸ್ಟ್ರೇಲಿಯಾದಿಂದ ಬಂದಾಗ ಶೆಟ್ಟರ್ ಅವರು ಪತ್ನಿ, ಮಗಳು, ಮೊಮ್ಮಕ್ಕಳನ್ನು ನಮ್ಮ ಮನೆಗೆ ಕರೆ ತಂದರು. ಅವರ ಪತ್ನಿ ಪ್ರೇಮಾ, ಶ್ರೀದೇವಿಗೆ ಬಹಳ ನಿಕಟ ಗೆಳತಿಯಾದರು. ಆಸ್ಟ್ರೇಲಿಯಾದಲ್ಲಿದ್ದರೂ ಅವರ ಮಗಳು, ಮೊಮ್ಮಕ್ಕಳು ಕೂಡ ಸರಾಗವಾಗಿ ಕನ್ನಡ ಮಾತಾಡುತ್ತಿದ್ದರಿಂದ ಯಾವುದೇ ಹಮ್ಮು ಬಿಮ್ಮಿಗೆ ಅವಕಾಶವೇ ಇಲ್ಲದಂತೆ ಸಹಜವಾದ ಸ್ನೇಹ ಸಂಗಮದಂತಿತ್ತು ನಮ್ಮ ಭೇಟಿ. 'ಶಾಮಣ್ಣ ಸರೋದ್ ನುಡಿಸಿ, ಕೊಳಲು ನುಡಿಸಿ' ಎಂದೆಲ್ಲ ಒತ್ತಾಯಿಸಿ ನಮ್ಮ ಮನೆಯಲ್ಲಿ ಅವರಿರುವಾಗ ನನ್ನ ಸಂಗೀತದ ಕೇಳುಗರಾಗುತ್ತಿದ್ದರು.

ಆ ನಂತರದಲ್ಲಿ ನನ್ನ ಆತ್ಮಕಥನ 'ಕಾಡತೊರೆಯ ಜಾಡು' ಬೆಂಗಳೂರಿನಲ್ಲಿ 2011ರಲ್ಲಿ 'ಅಭಿನವ ಪ್ರಕಾಶನ'ದಿಂದ ಪ್ರಕಟವಾಗಿ ಬಿಡುಗಡೆಯಾದಾಗ ಅವರೇ ಬಂದು ಪುಸ್ತಕ ಬಿಡುಗಡೆ ಮಾಡಿ ನಮ್ಮ ಗೆಳೆತನದ ದಿನಗಳನ್ನು ಮೆಲುಕು ಹಾಕಿದರು. ಕಾರ್ಯಕ್ರಮದ ಅಧ್ಯಕ್ಷತೆ ಹಿರಿಯರಾದ ಎಚ್.ಎಸ್. ದೊರೆಸ್ವಾಮಿಯವರದ್ದಾಗಿತ್ತು. ಪುಸ್ತಕದ ಬಗ್ಗೆ ಮಾತು ವಿಮರ್ಶಕಿ ಎಂ.ಎಸ್. ಆಶಾದೇವಿಯವರದ್ದು; ಈ ಮೂವರೂ ಒಂದಲ್ಲ ಒಂದು ತರಹದಲ್ಲಿ ನನಗೆ ಬಹಳ ನಿಕಟವಾದವರು. ಕಾರ್ಯಕ್ರಮದ ನಂತರದಲ್ಲಿ ಶೆಟ್ಟರ್ ಪತ್ನಿ ಪ್ರೇಮಾ ತಮ್ಮ ಮನೆಗೆ ಬರುವಂತೆ ಶ್ರೀದೇವಿ ಮತ್ತು ನನ್ನನ್ನು ಬಹಳವಾಗಿ ಒತ್ತಾಯಿಸಿದರು. ಆದರೆ ನನ್ನ ತಮ್ಮನ ಪತ್ನಿ ಶೋಭಾ ಆ ಸಂದರ್ಭದಲ್ಲಿ ತೀವ್ರ ಅನಾರೋಗ್ಯಕ್ಕೀಡಾಗಿ ಆಸ್ಪತ್ರೆಯಲ್ಲಿದ್ದುದರಿಂದ ನಮ್ಮ ಕುಟುಂಬದ ಸಂಕಟದ ಸಂದರ್ಭ ಅದಾಗಿತ್ತು. ಆದ್ದರಿಂದ ಪ್ರೇಮಾ ಅವರಿಗೆ ಪರಿಸ್ಥಿತಿ ತಿಳಿಸಿ ಕಾರ್ಯಕ್ರಮವನ್ನು ಬಹಳ ಬೇಗನೆ ಮುಗಿಸಿ ಹೊರಳಿ ಬರಬೇಕಾಯಿತು.

ನಾನು ಜೆ.ಎಚ್. ಪಟೇಲರು ಮುಖ್ಯಮಂತ್ರಿಯಾಗಿದ್ದಾಗ ಅವರಿಗೊಂದು ಮನವಿ ಸಲ್ಲಿಸಿದ್ದೆ; 'ಊರಿಗೊಂದು ಗ್ರಂಥಾಲಯ ಮತ್ತು ಮನೆಗೊಂದು ಶೌಚಾಲಯ'ವನ್ನು ಸರ್ಕಾರವೇ ನಿರ್ಮಾಣ ಮಾಡಿಸಿಕೊಡಬೇಕು ಎಂಬುದಾಗಿ. ಈ ಮನವಿಯನ್ನು ಪಟೇಲರು ಮತ್ತು ಮಂತ್ರಿಯಾಗಿದ್ದ ಎಂ.ಪಿ.